# ಬೀಜ ಪ್ರಸಾರ

■ ಡಾ. ಕರವೀರಪ್ರಭು ಕ್ಯಾಲಕೊಂಡ
ಚಿತ್ರ: ವಿಜಯ ಕುಮಾರಿ ಆರ್

ಹಕ್ಕಿಯೊಂದು ಹಾರಿ ಬಂದು
ಮರದ ಮೇಲೆ ಕೂತಿತು
ಮಾಗಿ ನಿಂತ ಹಣ್ಣು ಕಂಡು
ತಿನ್ನೊ ಆಸೆ ಮೂಡಿತು

ಕುಕ್ಕಿ ಕುಕ್ಕಿ ಹಣ್ಣುಗಳನು
ಹೊಟ್ಟೆ ತುಂಬ ತಿಂದಿತು
ಪಕ್ಕ ಬಿಚ್ಚಿ ಹಾರಿ ಹಾರಿ
ದೂರ ಹೋಗಿ ಬಿಟ್ಟಿತು

ಹಿಕ್ಕೆಯಲ್ಲಿ ಬೀಜವನ್ನು
ಹಕ್ಕಿ ಹಾಕಿ ಹೋಯಿತು
ಭುವಿಗೆ ಬಿದ್ದ ಬೀಜವನ್ನು
ಮಣ್ಣು ಅಪ್ಪಿಕೊಂಡಿತು

ಮೋಡ ದಿಂದ ಮಳೆಯ ಹನಿಯು
ಮುತ್ತಿನಂತೆ ಸುರಿಯಿತು
ಬಿದ್ದ ನೀರ ಹೀರಿಕೊಂಡು
ಬೀಜ ಮೊಳಕೆ ಒಡೆಯಿತು

ಹಚ್ಚ ಹಸಿರು ಎಲೆಯ ಬಿಟ್ಟು
ಸಸಿಯು ಬೆಳೆಯತೊಡಗಿತು
ಹೂವು ಬಿಟ್ಟು ಚಿಟ್ಟೆಯನ್ನು
ತನ್ನ ಕಡೆಗೆ ಸೆಳೆಯಿತು

ಹೂವಿನಿಂದ ಹೂವಿಗಾರಿ
ಚಿಟ್ಟೆ ಮಧುವ ಹೀರಿತು
ಹಸಿದ ಒಡಲು ತುಂಬಿಕೊಂಡು
ಖುಷಿಯಿಂದ ಹಾಡಿತು

ಹೂವು ಫಲಿತು ಹಣ್ಣು ಆಗಿ
ಮಾಗಿ ಹಕ್ಕಿ ಕರೆಯಿತು
ಹಣ್ಣು ತಿಂದ ಹಕ್ಕಿಯಿಂದ
ಬೀಜ ಭೂಮಿ ಸೇರಿತು



## ಕುಂಚ ಪ್ರಪಂಚ

'ಸುಧಾ' 'ಕುಂಚ ಪ್ರಪಂಚ' ವಿಭಾಗಕ್ಕೆ ಮಕ್ಕಳೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ಭಾವಚಿತ್ರದ ಜೊತೆ ನಮಗೆ ಕಳುಹಿಸಿಕೊಡಿ. ವಿಳಾಸ: editorsu@sudha.co.in





**ಅನಘಾ**
10ನೇ ತರಗತಿ
ಸಂತ ಜೋಸೆಫ್ಸ್
ಶಾಲೆ ಮೈಸೂರು





**ಎಸ್. ಆದಿತ್ಯ ಸ್ಕಂದ**
9ನೇ ತರಗತಿ
ಬಿಬಿಯುಎಲ್ ಜೈನ್
ವಿದ್ಯಾಲಯ ಬೆಂಗಳೂರು





**ನಿನಾದ್ ಕಾರಂತ್**
4ನೇ ತರಗತಿ
ಜಿ.ಜಿ.ಆರ್.ವಿ.ಕೆ. ಶಾಲೆ
ಬೆಂಗಳೂರು